5.	ವಲಯಾರಣ್ಯಾಧಿಕಾರಿಗಳು	-	29	
6.	ವನಪಾಲಕರು	-	9	
7.	ಮೊದಲನೇ ದರ್ಜೆ ಸಹಾಯಕರು	-	2	ವೇತನ ಸರ್ಕಾರದ
8.	ವಿನ್ಯಾಸಕರು	-	1	ನಿಯಮಾನುಸಾರ
9.	ಅಧೀಕ್ಷಕರು	-	1	
	ಒಟ್ಟು		**50**	

ಆ) ಕಾರ್ಖಾನೆಯ ನೌಕರರು 108 (ಕಂಪನಿಯ ವೇತನಶ್ರೇಣಿ ಪ್ರಕಾರ)

ಇ) ಕ್ರೋಢಿಕೃತ ಅರಣ್ಯ ಕಾರ್ಮಿಕರು 534 (ಸಂಚಿತ ವೇತನ ರೂ.1000 ದಿಂದ ರೂ.1490.00 ರವರೆಗೆ. ಈಗ ಕನಿಷ್ಟ ವೇತನ ಜಾರಿಗೊಳಿಸಲಾಗುತ್ತಿದೆ).

ಒಟ್ಟು **692**

ಉ) ಎಂ.ಪಿ.ಎಂ. ಈ ಸಿಬ್ಬಂದಿಯ ಆಡಳಿತ ವರ್ಗ.

ಜಮೀನುಗಳ ಮರು ಭೂಮಾಪನ

695 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕೆ.ಎಲ್.ಆರ್. ಕಾನೂನು ಪ್ರಕಾರ ಪ್ರತಿ 30 ವರ್ಷಗಳಿಗೊಮ್ಮೆ ಜಮೀನುಗಳ ಮರು ಭೂಮಾಪನಾ (ರೀಸರ್ವೆ) ಮಾಡಬೇಕಾಗಿದ್ದರೂ, ಸರ್ಕಾರ ಇದುವರೆವಿಗೂ ರೀಸರ್ವೆ ಮಾಡಿಸದೆ ಇದ್ದುದರಿಂದ ಜಮೀನುಗಳಲ್ಲಿಯ ಬದಲಾವಣೆಗಳನ್ನು ಗುರ್ತಿಸಲಾಗದೆ ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2. *ಹಾಗಿದ್ದಲ್ಲಿ, ಅದರ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಜಮೀನುಗಳ ಮರು ಭೂಮಾಪನ (ರೀಸರ್ವೆ) ಕಾರ್ಯವನ್ನು 30 ವರ್ಷಗಳಿಗೊಮ್ಮೆ ಮಾಡಬೇಕೆಂದು ಕೆ.ಎಲ್.ಆರ್. ನಿಯಮಾವಳಿಯಲ್ಲಿ ಎಲ್ಲೂ ಇರುವುದಿಲ್ಲ. ಆದರೆ ಸದರಿ ನಿಯಮಾವಳಿಯಲ್ಲಿ ಸರ್ಕಾರ ಇಚ್ಛಿಸಿದಲ್ಲಿ ಯಾವಾಗ ಬೇಕಾದರೂ ಮರು ಭೂಮಾಪನ (ರೀ ಸರ್ವೆ) ಕಾರ್ಯವನ್ನು ಕೈಗೊಳ್ಳಬಹುದೆಂದು ಸೂಚಿಸಲಾಗಿರುತ್ತದೆ. ರೀಸರ್ವೆ ಮಾಡಿಸದೆ ಇದ್ದುದರಿಂದ,

ಜಮೀನುಗಳಲ್ಲಿ ಬದಲಾವಣೆಗಳನ್ನು ಗುರ್ತಿಸಲಾಗದೆ, ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2. ರಾಜ್ಯದಲ್ಲಿ ಮರುಭೂಮಾಪನ ಕಾರ್ಯಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರದ ಸ್ಮಶಾನ ಭೂಮಿ

696 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿಧಾರವಾಡ ಮಹಾನಗರದಲ್ಲಿ ಇರತಕ್ಕ ಸ್ಮಶಾನಗಳ ಸಂಖ್ಯೆ ಎಷ್ಟು ಅವುಗಳು ಯಾವುವು ಇನ್ನು ಎಷ್ಟು ಸ್ಮಶಾನಭೂಮಿಗಳ ಅವಶ್ಯಕತೆ ಇದೆ?

ಆ) ಈಗ ಇರುವ ಸ್ಮಶಾನಭೂಮಿಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಒಟ್ಟು ಸಂಖ್ಯೆ 50 (ಪಟ್ಟಿ ಲಗತ್ತಿಸಿದೆ) ಹುಬ್ಬಳ್ಳಿಯಲ್ಲಿ 3, ಧಾರವಾಡದಲ್ಲಿ 2 ಸ್ಮಶಾನ ಭೂಮಿಗಳ ಅವಶ್ಯಕತೆ ಇದೆ.

ಆ) ಈಗ ಇರುವ ಸ್ಮಶಾನಭೂಮಿಗಳಲ್ಲಿ ಕೆಲವು ಖಾಸಗಿ ಒಡೆತನದಲ್ಲಿದ್ದು, ಅವುಗಳ ಅಭಿವೃದ್ಧಿಯನ್ನು ಅವರೇ ಕೈಗೊಳ್ಳುತ್ತಿದ್ದಾರೆ. ಉಳಿದವುಗಳಿಗೆ ಸರ್ಕಾರದ ವತಿಯಿಂದ ಸ್ಮಶಾನಗಳ ಅಭಿವೃದ್ಧಿಗಾಗಿ ಅಯವ್ಯಯದಲ್ಲಿ ರೂ. 12.00 ಲಕ್ಷಗಳನ್ನು ಹಾಗೂ ಖಾಸಗೀ ಸ್ಮಶಾನದ ಸುಧಾರಣೆಗೆ ರೂ. 2.00 ಲಕ್ಷಗಳ ಅವಕಾಶ ಕಲ್ಪಿಸಿದ್ದು, ಸ್ಮಶಾನಗಳಲ್ಲಿ ಬೋರ್‌ವೆಲ್, ನಳ ಜೋಡಣೆ, ರಸ್ತೆ ಗಟಾರ, ತಂತಿಬೇಲಿ ಮತ್ತು ವಿದ್ಯುತ್ ದೀಪಗಳನ್ನು ಹಾಕಿಸುವ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಇರುವ ಸ್ಮಶಾನಗಳ ವಿವರ

1	2	3	4
1.	ಹಳೇ ಹುಬ್ಬಳ್ಳಿ	ರುದ್ರಭೂಮಿ	(ಹಿಂದು)
2.	ಹಳೇ ಹುಬ್ಬಳ್ಳಿ	ರುದ್ರಭೂಮಿ (ಕೊನಿ ಮಸೂತಿ)	(ಮುಸ್ಲಿಂ)
3.	ಬಿಡನಾಳ	ರುದ್ರಭೂಮಿ	(ಹಿಂದು)
4.	ಗವಿ ಓಣಿ (ಮಿಶನ್‌ಕಂಪೌಂಡ್)	-"-	(ಕ್ರಿಶ್ಚಿಯನ್)
5.	ಗವಿ ಓಣಿ	-"-	(ಮುಸ್ಲಿಂ)